**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನ ಸಭೆ**

**ಆರನೇ ಅಧಿವೇಶನ**

# ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ, 2015

**(2015ರ ವಿಧಾನ ಸಭೆಯ ವಿಧೇಯಕ ಸಂಖ್ಯೆ – 02)**

ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 36) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**–(1) ಈ ಅಧಿನಿಯಮವನ್ನು ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.**– ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 36) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,–

(i) (3ಎ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3ಬಿ) "ಅಧ್ಯಕ್ಷ" ಎಂದರೆ, 3ಎ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ನೇಮಕ ಮಾಡುವ ಮಂಡಳಿಯ ಅಧ್ಯಕ್ಷ."

**(ii)** (6)ನೇ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(6ಎ) "ನಿರ್ದೇಶಕ" ಎಂದರೆ, ಮಂಡಳಿಯ ನಿರ್ದೇಶಕ."

**(iii)** (11)ನೇ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(11ಎ) "ವ್ಯವಸ್ಥಾಪಕ ನಿರ್ದೇಶಕ" ಎಂದರೆ, 3ಬಿ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ನೇಮಕ ಮಾಡುವ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕ."

**3. 3ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ,–

**(i)** (2) ಮತ್ತು (3)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು,–

(i) ಅಧ್ಯಕ್ಷ;

(ii) ವ್ಯವಸ್ಥಾಪಕ ನಿರ್ದೇಶಕ; ಮತ್ತು

(iii) ಒಂಬತ್ತು ಇತರ ನಿರ್ದೇಶಕರು, ಅವರಲ್ಲಿ,–

(ಎ) ಒಬ್ಬನು, ವಾಣಿಜ್ಯ ವಿಷಯಗಳು ಮತ್ತು ಆಡಳಿತದಲ್ಲಿ ಅನುಭವ ಮತ್ತು ಸಾಮರ್ಥ್ಯವುಳ್ಳ ಉನ್ನತ ಸ್ಥಾನವನ್ನು ಹೊಂದಿದ್ದ ಅಥವಾ ಒಂದು ಸಾರ್ವಜನಿಕ ಉದ್ಯಮದಲ್ಲಿ ಅದರಲ್ಲಿಯೂ, ನೀರು ಸರಬರಾಜು ಅಥವಾ ಗ್ರಾಮಸಾರ ವಿಲೆ ಉದ್ಯಮದಲ್ಲಿ ಲೆಕ್ಕಪತ್ರ ಮತ್ತು ಹಣಕಾಸು ವಿಷಯಗಳಲ್ಲಿ ಅನುಭವವುಳ್ಳ ವ್ಯಕ್ತಿಯಾಗಿರತಕ್ಕದ್ದು.

(ಬಿ) ಒಬ್ಬನು, ಸಿವಿಲ್/ಮೆಕಾನಿಕಲ್/ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಕಾಮಗಾರಿಗಳಲ್ಲಿ ಅದರಲ್ಲಿಯೂ ನೀರು ಸರಬರಾಜು, ಚರಂಡಿ ಮತ್ತು ಗ್ರಾಮಸಾರ ವಿಲೆ ಮತ್ತು ಕೈಗಾರಿಕಾ ತ್ಯಾಜ್ಯಗಳಿಗೆ ಸಂಬಂಧಪಟ್ಟಂತೆ ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ವ್ಯಾಪಕ ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರತಕ್ಕದ್ದು; ಮತ್ತು

(ಸಿ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ; –– ಪದನಿಮಿತ್ತ ನಿರ್ದೇಶಕ

(ಡಿ) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ);

–– ಪದನಿಮಿತ್ತ ನಿರ್ದೇಶಕ

(ಇ) ಆಯುಕ್ತ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ;

-- ಪದನಿಮಿತ್ತ ನಿರ್ದೇಶಕ

(ಎಫ್) ಆಯುಕ್ತ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ;

-- ಪದನಿಮಿತ್ತ ನಿರ್ದೇಶಕ

(ಜಿ) ಆಯುಕ್ತ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ;

-- ಪದನಿಮಿತ್ತ ನಿರ್ದೇಶಕ

(ಎಚ್) ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ; ಮತ್ತು

-- ಪದನಿಮಿತ್ತ ನಿರ್ದೇಶಕ

(ಐ) ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ;

-- ಪದನಿಮಿತ್ತ ನಿರ್ದೇಶಕ."

**(ii)** (4)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

**(iii)** (5)ನೇ ಉಪಪ್ರಕರಣದಲ್ಲಿ "ಸದಸ್ಯನಾಗಿರಲು" ಎಂಬ ಪದಕ್ಕೆ "ನಿರ್ದೇಶಕನಾಗುವುದಕ್ಕೆ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**4. 3ಎ, 3ಬಿ ಮತ್ತು 3ಸಿ ಹೊಸ ಪ್ರಕರಣಗಳ ಸೇರ್ಪಡೆ.–** ಮೂಲ ಅಧಿನಿಯಮದ 3ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**3ಎ. ಅಧ್ಯಕ್ಷನ ನೇಮಕಾತಿ ಮತ್ತು ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು.–** (1) ಅಧ್ಯಕ್ಷನನ್ನು ರಾಜ್ಯ ಸರ್ಕಾರವು ನೇಮಕಮಾಡತಕ್ಕದ್ದು ಮತ್ತು ರಾಜ್ಯ ಸರ್ಕಾರದ ಇಷ್ಟಪರ್ಯಂತ ಪದವನ್ನು ಹೊಂದಿರತಕ್ಕದ್ದು.

(2) 4ನೇ ಪ್ರಕರಣಕ್ಕೊಳಪಟ್ಟು, ಅಧ್ಯಕ್ಷನ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಅಧ್ಯಕ್ಷನು ರಾಜ್ಯ ಸರ್ಕಾರಕ್ಕೆ ಲಿಖಿತದಲ್ಲಿ ಪತ್ರವನ್ನು ಬರೆದು ತನ್ನ ಪದಕ್ಕೆ ರಾಜೀನಾಮೆಯನ್ನು ನೀಡಬಹುದು.

(4) ಒಬ್ಬ ವ್ಯಕ್ತಿಯು,–

(ಎ) ಅವಿಮುಕ್ತ ದಿವಾಳಿಯಾದರೆ; ಅಥವಾ

(ಬಿ) ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧದ ಅಪರಾಧ ನಿರ್ಣೀತನಾಗಿದ್ದರೆ ಮತ್ತು ಕಾರವಾಸದ ಶಿಕ್ಷೆಗೆ ಒಳಗಾಗಿದ್ದರೆ, ಅಥವಾ

(ಸಿ) ಅಸ್ವಸ್ಥಚಿತ್ತನಾದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿತನಾದರೆ; ಅಥವಾ

(ಡಿ) ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಹಾಗೆ ಕಾರ್ಯನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಇ) ಅಧ್ಯಕ್ಷನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದಾನೆಂದು ಸರ್ಕಾರವು ಅಭಿಪ್ರಾಯಪಟ್ಟರೆ,

– ರಾಜ್ಯ ಸರ್ಕಾರವು, ಆತನನ್ನು ಅಧ್ಯಕ್ಷನ ಪದದಿಂದ ತೆಗೆದುಹಾಕತಕ್ಕದ್ದು.

(5) ರಾಜ್ಯ ಸರ್ಕಾರಕ್ಕೆ ವಿವರಣೆ ಸಲ್ಲಿಸಲು ಅಧ್ಯಕ್ಷನಿಗೆ ಒಂದು ಅವಕಾಶವನ್ನು ನೀಡಿದ ಹೊರತು, (4)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ ಅಥವಾ ತೆಗೆದುಹಾಕತಕ್ಕದ್ದಲ್ಲ. ಹಾಗೆ ತೆಗೆದುಹಾಕಲಾಗಿರುವ ಅಧ್ಯಕ್ಷನು, ಅಧ್ಯಕ್ಷನಾಗಿ ಅಥವಾ ನಿರ್ದೇಶಕನಾಗಿ ಅಥವಾ ಮಂಡಳಿಯ ಯಾವುದೇ ಇತರ ಸ್ಥಾನದಲ್ಲಿ ಮರುನೇಮಕಾತಿಗಾಗಿ ಅರ್ಹನಾಗಿರತಕ್ಕದ್ದಲ್ಲ.

**3ಬಿ. ವ್ಯವಸ್ಥಾಪಕ ನಿರ್ದೇಶಕನ ನೇಮಕಾತಿ.–** ವ್ಯವಸ್ಥಾಪಕ ನಿರ್ದೇಶಕನು ಮಂಡಳಿಯ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ರಾಜ್ಯ ಸರ್ಕಾರವು, ಅಧಿಕ ಕಾಲಿಕ (super time) ವೇತನ ಶ್ರೇಣಿಗಿಂತ ಕಡಿಮೆಯಿರದ ದರ್ಜೆಯ ಭಾರತೀಯ ಆಡಳಿತ ಸೇವೆಯ ಒಬ್ಬ ಅಧಿಕಾರಿಯನ್ನು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕನನ್ನಾಗಿ ನೇಮಕ ಮಾಡತಕ್ಕದ್ದು.

**3ಸಿ. ವ್ಯವಸ್ಥಾಪಕ ನಿರ್ದೇಶಕನ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ವ್ಯವಸ್ಥಾಪಕ ನಿರ್ದೇಶಕನು, ಮಂಡಳಿಯ ಮುಖ್ಯ ಕಾರ್ಯನಿರ್ವಾಹಣಾ ಮುಖ್ಯಸ್ಥನಾಗಿರತಕ್ಕದ್ದು.

(2) ವ್ಯವಸ್ಥಾಪಕ ನಿರ್ದೇಶಕನು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಆತನಿಗೆ ಪ್ರದತ್ತ ಮಾಡಲಾದ ಅಂಥ ಪ್ರಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ,–

(ಎ) ಮಂಡಳಿಯ ನಿರ್ಣಯವನ್ನು ಜಾರಿಗೆ ತರತಕ್ಕದ್ದು;

(ಬಿ) ಮಂಡಳಿಯ ಪತ್ರವ್ಯವಹಾರಗಳನ್ನು ಇಡತಕ್ಕದ್ದು ಮತ್ತು ನೆರವೇರಿಸತಕ್ಕದ್ದು;

(ಸಿ) ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಯೋಜನೆಗಳು ಮತ್ತು ಕಾಮಗಾರಿಗಳನ್ನು ನಿರ್ವಹಿಸತಕ್ಕದ್ದು ಮತ್ತು ಜಾರಿಗೆ ತರತಕ್ಕದ್ದು ಹಾಗೂ ಅವಶ್ಯಕ ವೆಚ್ಚಗಳನ್ನು

ಮಾಡತಕ್ಕದ್ದು;

(ಡಿ) ಮಂಡಳಿಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಹೊಣೆಗಾರನಾಗಿರತಕ್ಕದ್ದು;

(ಇ) ಮಂಡಳಿಯ,–

(i) ಲೆಕ್ಕಪತ್ರಗಳ ಮತ್ತು ನಡವಳಿಗಳ; ಮತ್ತು

(ii) ಎಲ್ಲಾ ಅಧಿಕಾರಿಗಳ ಮತ್ತು ನೌಕರರ,

–ಮೇಲ್ವಿಚಾರಣೆಯನ್ನು ಮತ್ತು ನಿಯಂತ್ರಣವನ್ನು ಮಾಡತಕ್ಕದ್ದು.

(ಎಫ್) ನಿಯಮಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು."

**5. 5ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 5ನೇ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಒಬ್ಬ ವ್ಯಕ್ತಿಯು, ಇಲ್ಲಿ ಇನ್ನುಮುಂದೆ ಉಪಬಂಧಿಸಿದ್ದುದನ್ನು ಉಳಿದು,–

(ಎ) ಆತನು ಸ್ವತಃ ತಾನಾಗಿಯೇ ನೇರವಾಗಿ ಅಥವಾ ಪರೋಕ್ಷವಾಗಿಯಾಗಲೀ ಅಥವಾ ತನ್ನ ಪಾಲುದಾರನ ಮೂಲಕವಾಗಿಯಾಗಲಿ ನೇರವಾಗಿ ಅಥವಾ ಪರೋಕ್ಷವಾಗಿ ಮಂಡಳಿಯ ಆದೇಶದ ಮೂಲಕ ಮಾಡಿದ ಯಾವುದೇ ಕಾಮಗಾರಿಯಲ್ಲಿ ಅಥವಾ ಮಂಡಳಿಯೊಂದಿಗೆ ಅಥವಾ ಅದರ ಅಡಿಯಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ನಿಯೋಜನೆಯಲ್ಲಿ ಯಾವುದೇ ಪಾಲನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ;

(ಬಿ) ಆತನು ಮಂಡಳಿಯ ಒಬ್ಬ ಅಧಿಕಾರಿ ಅಥವಾ ನೌಕರನಾಗಿದ್ದರೆ;

–ಮಂಡಳಿಯ ನಿರ್ದೇಶಕನಾಗಿ ನೇಮಕವಾಗಲು ಮತ್ತು ಅದರ ನಿರ್ದೇಶಕನಾಗಿರಲು ಅನರ್ಹನಾಗಿರತಕ್ಕದ್ದು."

(ii) (3)ನೇ ಉಪಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(4) (1)ನೇ ಉಪಪ್ರಕರಣದ (ಬಿ) ಖಂಡದ ಉದ್ದೇಶಕ್ಕಾಗಿ, ಮಂಡಳಿಯ ಅಧ್ಯಕ್ಷನನ್ನು ಹಾಗೂ ವ್ಯವಸ್ಥಾಪಕ ನಿರ್ದೇಶಕನನ್ನು ಮಂಡಳಿಯ ಅಧಿಕಾರಿಯನ್ನಾಗಿ ಅಥವಾ ನೌಕರನನ್ನಾಗಿ ಭಾವಿಸತಕ್ಕದ್ದಲ್ಲ."

**6. 10ನೇ ಪ್ರಕರಣದ ಪ್ರತಿಯೋಜನೆ.–** ಮೂಲ ಅಧಿನಿಯಮದ 10ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"**10. ಮಂಡಳಿಯ ಆದೇಶಗಳು ಮತ್ತು ಇತರ ಲಿಖಿತಗಳ ಅಧಿಪ್ರಮಾಣೀಕರಣ.–** ಮಂಡಳಿಯ ಎಲ್ಲಾ ಆದೇಶಗಳು ಮತ್ತು ತೀರ್ಮಾನಗಳನ್ನು ವ್ಯವಸ್ಥಾಪಕ ನಿರ್ದೇಶಕನು ಅಥವಾ ಈ ಬಗ್ಗೆ ಮಂಡಳಿಯು ಅಧಿಕೃತಗೊಳಿಸಿದ ಯಾವೊಬ್ಬ ಇತರ ನಿರ್ದೇಶಕನು ಸಹಿ ಮಾಡುವ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ಮಂಡಳಿಯು ಹೊರಡಿಸಿದ ಎಲ್ಲಾ ಇತರ ಲಿಖಿತಗಳನ್ನು, ಈ ಬಗ್ಗೆ ಅದೇ ರೀತಿಯಲ್ಲಿ ಅಧಿಕೃತಗೊಳಿಸಬಹುದಾದ ಅಂಥ ಮಂಡಳಿಯ ಅಧಿಕಾರಿಯು ಸಹಿ ಮಾಡುವ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು."

**7. 12ಎ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 12ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"**12ಎ ವ್ಯವಸ್ಥಾಪಕ ನಿರ್ದೇಶಕನ ತುರ್ತು ಅಧಿಕಾರಗಳು.–** ವ್ಯವಸ್ಥಾಪಕ ನಿರ್ದೇಶಕನು, ತರ್ತು ಸಂದರ್ಭಗಳಲ್ಲಿ, ತನ್ನ ಅಭಿಪ್ರಾಯದಲ್ಲಿ, ಮಂಡಳಿಯ ಮಂಜೂರಾತಿಯ ಅಗತ್ಯವಿರುವ ಯಾವುದೇ ಕಾಮಗಾರಿಯನ್ನು ಸಾರ್ವಜನಿಕ ಸೇವೆಗೆ ಅಥವಾ ಸುರಕ್ಷತೆಗೆ ತುರ್ತಾಗಿ ನಿರ್ವಹಿಸುವುದು ಅಥವಾ ಅದನ್ನು ಮಾಡುವುದು ಅವಶ್ಯವೆನಿಸಿದರೆ, ಅವುಗಳನ್ನು ನಿರ್ವಹಿಸುವಂತೆ ಅಥವಾ ಯಾವುದೇ ಕಾರ್ಯವನ್ನು ಮಾಡುವಂತೆ ನಿರ್ದೇಶಿಸಬಹುದು ಮತ್ತು ಕಾಮಗಾರಿಯನ್ನು ನಿರ್ವಹಿಸಲು ಅಥವಾ ಕಾರ್ಯವನ್ನು ಮಾಡಲು ಆಗುವ ವೆಚ್ಚಗಳನ್ನು ಮಂಡಳಿಯ ಅನುಸಮರ್ಥನೆಗೆ ಒಳಪಟ್ಟು, ಮಂಡಳಿಯ ನಿಧಿಯಿಂದ ಪಾವತಿಸತಕ್ಕದ್ದು ಎಂದೂ ನಿರ್ದೇಶಿಸಬಹುದು:

ಪರಂತು,–

(ಎ) ಆತನು, ಯಾವುದೇ ನಿರ್ದಿಷ್ಟ ಕೆಲಸದ ನಿರ್ವಹಣೆಯನ್ನು ಅಥವಾ ಯಾವುದೇ ನಿರ್ದಿಷ್ಟ ಕಾರ್ಯ ಮಾಡುವುದನ್ನು ನಿಷೇಧಿಸಿದ ಮಂಡಳಿಯ ಅಥವಾ ಸರ್ಕಾರದ ಯಾವುದೇ ನಿರ್ದೇಶನವನ್ನು ಉಲ್ಲಂಘಿಸಿ, ಈ ಪ್ರಕರಣದ ಅಡಿಯಲ್ಲಿ ಕಾರ್ಯನಿರ್ವಹಿಸತಕ್ಕದ್ದಲ್ಲ;

(ಬಿ) ಈ ಪ್ರಕರಣದ ಅಡಿಯಲ್ಲಿ ತಾನು ತೆಗೆದುಕೊಂಡ ಕ್ರಮವನ್ನು ಮತ್ತು ಅದರ ಕಾರಣವನ್ನು ಮಂಡಳಿಗೆ ಅದರ ಮುಂದಿನ ಸಭೆಯಲ್ಲಿ ಆತನು ವರದಿ ಮಾಡತಕ್ಕದ್ದು."

**8. 17ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 17ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ, "ಸದಸ್ಯರು," ಎಂಬ ಪದವನ್ನು ಮತ್ತು ಅಲ್ಪವಿರಾಮ ಚಿಹ್ನೆಯನ್ನು ಬಿಟ್ಟುಬಿಡತಕ್ಕದ್ದು.

**9. ಪದಾವಳಿಗಳ ಪ್ರತಿಯೋಜನೆ.–** ಮೂಲ ಅಧಿನಿಯಮದ 6ನೇ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡ ಮತ್ತು 101ನೇ ಪ್ರಕರಣವನ್ನು ಹೊರತುಪಡಿಸಿ, "ಸದಸ್ಯ" ಅಥವಾ "ಸದಸ್ಯರು" ಎಂಬ ಪದಗಳು ಬರುವ ಕಡೆಗಳಲೆಲ್ಲ ಅನುಕ್ರಮವಾಗಿ "ನಿರ್ದೇಶಕ" ಅಥವಾ "ನಿರ್ದೇಶಕರು" ಎಂಬ ಪದಗಳನ್ನು ಪ್ರತ್ಯಯಗಳೊಂದಿಗೆ ಪ್ರತಿಯೋಜಿಸತಕ್ಕದ್ದು.

**ಉದ್ದೇಶ ಮತ್ತು ಕಾರಣಗಳ ಹೇಳಿಕೆ**

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಉಪಬಂಧ ಕಲ್ಪಿಸಲಾದಂತೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಉತ್ತಮ ಕಾರ್ಯನಿರ್ವಹಣೆಗಾಗಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿಗಾಗಿ ಹಾಗೂ ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳಿಗಾಗಿ ಉಪಬಂಧವನ್ನು ಕಲ್ಪಿಸಲು ಬೆಂಗಳೂರು ನಗರ ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ರಾಜ್ಯದ ಸಂಚಿತ ನಿಧಿಯ ಮೇಲೆ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನೆಗೆ ಸಂಬಂಧಿಸಿದ ಜ್ಞಾಪನ ಪತ್ರ

| | |
|---|---|
| ಖಂಡ 4 : | 4ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಲಾದ 3ಎ ಮತ್ತು 3ಸಿ ಪ್ರಕರಣಗಳಲ್ಲಿ,–<br>**(i)** 3ಎ ಪ್ರಕರಣದ (2)ನೇ ಉಪಪ್ರಕರಣವು, ಮಂಡಳಿಯ ಅಧ್ಯಕ್ಷರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>**(ii)** 3ಸಿ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡವು, ಮಂಡಳಿಯ ವ್ಯವಸ್ಥಾಪಕ ನಿರ್ದೇಶಕನ ಅಧಿಕಾರಗಳ ಮತ್ತು ಪ್ರಕಾರ್ಯಗಳನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

**ಪಿ. ಓಂಪ್ರಕಾಶ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

# ಅನುಬಂಧ

## ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 36) ಉದ್ಧೃತ ಭಾಗ

Xx xx xx

**3. ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥಾ ಮಂಡಳಿಯ ರಚನೆ ಮತ್ತು ಸಂಯೋಜನೆ.–** (1) ರಾಜ್ಯ ಸರ್ಕಾರವು, ಈ ಅಧ್ಯಾಯವು ಪ್ರಾರಂಭವಾದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ "ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥಾ ಮಂಡಳಿ" ಎಂಬ ಹೆಸರಿನ ಮಂಡಳಿಯನ್ನು ರಚಿಸತಕ್ಕದ್ದು.

(2) ಆ ಮಂಡಳಿಯು, ರಾಜ್ಯ ಸರ್ಕಾರವು ನೇಮಕ ಮಾಡಿದ ಮೂವರಿಗಿಂತ ಕಡಿಮೆಯಿಲ್ಲದ ಮತ್ತು ಏಳಕ್ಕಿಂತ ಹೆಚ್ಚಿಲ್ಲದ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಆ ಸದಸ್ಯರಲ್ಲಿ –

(ಎ) ಒಬ್ಬನು, ವಾಣಿಜ್ಯ ವಿಷಯಗಳು ಮತ್ತು ಆಡಳಿತದಲ್ಲಿ ಅನುಭವವನ್ನು ಹೊಂದಿರುವ ಮತ್ತು ಸಾಮರ್ಥ್ಯವುಳ್ಳ ವ್ಯಕ್ತಿಯಾಗಿರತಕ್ಕದ್ದು;

(ಬಿ) ಒಬ್ಬನು, ಸಿವಿಲ್ ಇಂಜಿನಿಯರಿಂಗ್ ಕಾಮಗಾರಿಗಳಲ್ಲಿ ಅದರಲ್ಲಿಯೂ ನೀರು ಸರಬರಾಜು, ಚರಂಡಿ ಮತ್ತು ಗ್ರಾಮಸಾರ ವಿಲೆ ಮತ್ತು ಕೈಗಾರಿಕಾ ಕಸಗಳಿಗೆ ಸಂಬಂಧಪಟ್ಟಂತೆ ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ವ್ಯಾಪಕ ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರತಕ್ಕದ್ದು; ಮತ್ತು

(ಸಿ) ಒಬ್ಬನು, ಸಾರ್ವಜನಿಕ ಉಪಯುಕ್ತತಾ ಉದ್ಯಮದಲ್ಲಿ ಅದರಲ್ಲೂ ನೀರು ಸರಬರಾಜು ಅಥವಾ ಗ್ರಾಮಸಾರ ವಿಲೆ ಉದ್ಯಮದಲ್ಲಿ ಲೆಕ್ಕ ಮತ್ತು ಹಣಕಾಸಿನ ವಿಷಯಗಳಲ್ಲಿ ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರತಕ್ಕದ್ದು.

(4) (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅರ್ಹತೆಯನ್ನು ಹೊಂದಿರುವ ಒಬ್ಬ ಸದಸ್ಯನನ್ನು ಮಂಡಳಿಯ ಅಧ್ಯಕ್ಷನಾಗಿರಲು ರಾಜ್ಯ ಸರ್ಕಾರವು ನೇಮಕ ಮಾಡತಕ್ಕದ್ದು.

(5) ವ್ಯಕ್ತಿಯು, ಅವನು ಸಂಸತ್ತಿನ ಅಥವಾ ಯಾವುದೇ ರಾಜ್ಯ ವಿಧಾನಮಂಡಲದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಸದಸ್ಯನಾಗಿದ್ದರೆ ಅಥವಾ ನಿಕಟ ಪೂರ್ವದ ಹನ್ನೆರಡು ತಿಂಗಳುಗಳ ಒಳಗೆ ಹಾಗೆ ಇದ್ದಿದ್ದರೆ ಮಂಡಳಿಯ ಸದಸ್ಯನಾಗಿ ನೇಮಕಗೊಳ್ಳುವುದಕ್ಕೆ ಅಥವಾ ಸದಸ್ಯನಾಗಿರಲು ಅನರ್ಹನಾಗಿರತಕ್ಕದ್ದು.

Xx xx xx

**5. ಮಂಡಳಿಯ ಸದಸ್ಯನಾಗುವುದಕ್ಕಾಗಿ ಅನರ್ಹತೆಗಳು.–** (1) ಒಬ್ಬ ವ್ಯಕ್ತಿಯು, ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ ಹೊರತು ಮಂಡಳಿಯ ಆದೇಶದ ಮೂಲಕ ಮಾಡಿದ ಯಾವುದೇ ಕಾಮಗಾರಿಯಲ್ಲಿ ಅಥವಾ ಮಂಡಳಿಯೊಂದಿಗಿನ ಅಥವಾ ಅದರ ಅಡಿಯಲ್ಲಿ ಅಥವಾ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ನಿಯೋಜನೆಯಲ್ಲಿ ಅವನು ಸ್ವತಃ ನೇರವಾಗಿ ಅಥವಾ ಪರೋಕ್ಷವಾಗಿ ಅಥವಾ ಅವನ ಪಾಲುದಾರನ ಮೂಲಕ ಯಾವುದೇ ಹಿಸ್ಸೆ ಅಥವಾ

ಹಿತಾಸಕ್ತಿಯನ್ನು ಹೊಂದಿದ್ದರೆ, ಮಂಡಳಿಯ ಸದಸ್ಯನಾಗಿ ನೇಮಕಗೊಳ್ಳುವುದಕ್ಕಾಗಿ ಅನರ್ಹನಾಗಿರತಕ್ಕದ್ದು.

Xx xx xx

(3) (2)ನೇ ಉಪಪ್ರಕರಣದ ಪರಂತುಕದಲ್ಲಿ ಹೇಳಿರುವವುಗಳನ್ನು ಬಹಿರಂಗಪಡಿಸಿರುವುದನ್ನು ತಕ್ಷಣ ಮಂಡಳಿಯ ನಡವಳಿಕೆಗಳಲ್ಲಿ ದಾಖಲು ಮಾಡತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ತಿಳಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಆ ತರುವಾಯ ಅದು ಯುಕ್ತವೆಂದು ಭಾವಿಸಬಹುದಾದಂಥ ನಿರ್ದೇಶನವನ್ನು ಕೊಡಬಹುದು.

Xx xx xx

**10. ಮಂಡಳಿಯ ಆದೇಶಗಳು ಮತ್ತು ಇತರ ಲಿಖಿತಗಳ ಅಧಿಪ್ರಮಾಣೀಕರಣ.-** ಮಂಡಳಿಯ ಎಲ್ಲಾ ಆದೇಶಗಳು ಮತ್ತು ತೀರ್ಮಾನಗಳನ್ನು ಅಧ್ಯಕ್ಷನು ಅಥವಾ ಈ ಬಗ್ಗೆ ಮಂಡಳಿಯು ಅಧಿಕೃತಗೊಳಿಸಿದ ಯಾವನೇ ಇತರ ಸದಸ್ಯನು ರುಜು ಮಾಡುವ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ಮಂಡಳಿಯು ಹೊರಡಿಸಿದ ಎಲ್ಲಾ ಇತರ ಲಿಖಿತಗಳನ್ನು, ಈ ಬಗ್ಗೆ ಅದೇ ರೀತಿಯಲ್ಲಿ ಅಧಿಕೃತಗೊಳಿಸಬಹುದಾದಂಥ ಸದಸ್ಯನು ಅಥವಾ ಮಂಡಳಿಯ ಅಧಿಕಾರಿಯು ರುಜುವನ್ನು ಮಾಡುವ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು.

Xx xx xx

**17. ವಾರ್ಷಿಕ ಹಣಕಾಸು ವಿವರ ಪತ್ರ.-** (1) ಪ್ರತಿ ವರ್ಷದ ಫೆಬ್ರವರಿಯಲ್ಲಿ ಮಂಡಳಿಯು, ವಿನಿಯಮಗಳ ಮೂಲಕ ನಿಯಮಿಸಿದ ನಮೂನೆಯಲ್ಲಿ ಮುಂಬರುವ ವರ್ಷಕ್ಕಾಗಿನ ಅಂದಾಜು ಬಂಡವಾಳ ಮತ್ತು ಆದಾಯ ಜಮೆಗಳು ಮತ್ತು ವೆಚ್ಚಗಳ ವಿವರಪತ್ರವನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(2) ಸದರಿ ವಿವರ ಪತ್ರವು, ಮಂಡಳಿಯ ಸದಸ್ಯರು, ಅಧಿಕಾರಿಗಳು ಮತ್ತು ನೌಕರರ ಸಂಬಳಗಳು ಮತ್ತು ನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ತಪಶೀಲುಗಳ ವಿವರ ಪತ್ರವನ್ನು ಒಳಗೊಂಡಿರತಕ್ಕದ್ದು.

Xx xx xx

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ 1204, 750-ಪ್ರತಿಗಳು 16ನೇ ಮಾರ್ಚ್, 2015

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**SIXTH SESSION**

# THE BANGALORE WATER SUPPLY AND SEWERAGE (AMENDMENT) BILL, 2015

**(L.A. Bill No. 02 of 2015)**

A Bill further to amend the Bangalore Water Supply and Sewerage Act, 1964.

Whereas, it is expedient further to amend the Bangalore Water Supply and Sewerage Act, 1964 (Karnataka Act 36 of 1964) for the purposes hereinafter appearing;

Be it enacted by the Karnataka State Legislature in the sixty-sixth year of the Republic of India as follows:-

**1. Short title and commencement.-** (1) This Act may be called the Bangalore Water Supply and Sewerage (Amendment) Act, 2015.

(2) It shall come into force on such date as the State Government may by notification in the Official Gazette appoint.

**2. Amendment of section 2.-** In the Bangalore Water Supply and Sewerage Act, 1964 (Karnataka Act 36 of 1964) (hereinafter referred to as the principal Act), in section 2,-

(i) after clause (3A), the following shall be inserted, namely:-

"(3B) "Chairman" means Chairman of the Board appointed under section 3A by the State Government."

(ii) after clause (6), the following shall be inserted, namely:-

"(6A) "Director" means the Director of the Board"

(iii) after clause (11), the following shall be inserted, namely:-

"(11A) "Managing Director" means the Managing Director of the Board appointed under section 3B by the State Government."

**3. Amendment of section 3.-** In section 3 of the principal Act,-

(i) for sub-section (2) and (3), the following shall be substituted, namely:-

"(2) The Board shall consist of,-

(i) the Chairman;

(ii) the Managing Director; and

(iii) nine other Directors, of whom,-

(a) one shall be a person who has experience of and has capacity in commercial matters and administration and held higher position or experience of accounting and financial matters in a public sector undertaking, preferably in water supply or sewage disposal undertaking;

(b) one shall be a person with wide experience of civil/mechanical/electrical engineering works preferably in the field of public health engineering with reference to water supply, sewerage and sewerage disposal and industrial wastes; and

(c) the Additional Chief Secretary/Principal Secretary to Government, Urban Development Department; - Ex officio director

(d) the Secretary to Government, Finance Department (Expenditure); - Ex officio director

(e) the Commissioner, the Bruhat Bengaluru Mahanagara Palike; -Ex officio director

(f) the Commissioner, the Bangalore Metropolitan Regional Development Authority;

-Ex officio director

(g) the Commissioner, the Bangalore Development Authority; -Ex officio director

(h) the Managing Director, the Karnataka Urban Infrastructure Development Finance Corporation; and -Ex officio director

(i) the Managing Director, Karnataka Urban Water Supply and Drainage Board." -Ex officio director

(ii) sub-section (4) shall be omitted;

(iii) in sub section (5) for the words "being a member" the words "being a director" shall be substituted.

**4. Insertion of new sections 3A, 3B and 3C.-** After section 3 of the principal Act, the following shall be inserted, namely:-

"**3A. Appointment and terms and conditions of service of the Chairman.-** (1) The Chairman shall be appointed by State Government and shall hold office at the pleasure of the State Government.

(2) Subject to section 4 the other terms and conditions of service of the Chairman shall be such as may be prescribed by the rules by the State Government;

(3) The Chairman may resign the office by writing addressed to the Government;

(4) The Government shall remove a person from the Office of the Chairman if he,-

(a) becomes an un-discharged insolvent; or

(b) gets convicted and sentenced to imprisonment for an offence which involves moral turpitude; or

(c) becomes of unsound mind and declared so by competent court of law; or

(d) refuses to act or becomes incapable of acting as Chairman; or

(e) in the opinion of the Government has so abused the position of the Chairman.

(5) No order or removal shall be made under sub section (4) unless the Chairman has been given an opportunity to submit his explanation to the State Government. A Chairman who has been so removed shall not be eligible for re-appointment as chairman or a director or in any other capacity to the Board.

**3B. Appointment of the Managing Director.-** The managing director shall be a whole time officer of the Board. The State Government shall appoint an officer of Indian Administrative Service, not below the rank of Super time scale, as the Managing Director of the Board.

**3C. Powers and Duties of the Managing Director.-** (1) The Managing Director shall be the Chief Executive Head of the Board.

(2) The Managing Director shall in addition to performing such functions as are conferred on him by or under this Act shall,-

(a) carry into effect the resolution of the Board;

(b) keep and conduct the Board's correspondence;

(c) carryout and execute such schemes and works as the State Government may direct and incur necessary expenditure;

(d) be responsible for implementing schemes of the Board;

(e) exercise supervision and control over the,-

(i) accounts and proceedings of the board; and

(ii) all officers and servants of the Board.

(f) exercise such other power and carryout such other functions as may be prescribed.

**5. Amendment of section 5.-** In section 5 of the principal Act,-

(i) for sub-section (1), the following shall be substituted, namely:-

"(1) A person shall be disqualified for being appointed as director of the Board, and for being a director thereof, save as hereinafter provided if,-

(a) he has directly or indirect by himself or his partner any share or interest in any work done by order of the Board or in any contract or employment with, or under, or by, or on behalf of, the Board;

(b) he is an officer or servant of the Board."

(ii) after sub-section (3), the following shall be inserted, namely:-

"(4) For the purpose of clause (b) of sub-section (1), the Chairman and Managing Director of the Board shall not be deemed to be an officer or servant of the Board."

**6. Substitution of section 10.-** For section 10 of the principal Act, the following shall be substituted namely:-

**"10. Authentication of orders and other instruments of the Board.-** All orders and decisions of the Board shall be authenticated by the signature of the Managing Director or any other director authorised by the Board in this behalf and all other instruments issued by the Board shall be authenticated by the signature of such

officer of the Board as may in like manner be authorised in this behalf."

**7. Insertion of new section 12A.-** After section 12 of the principal Act, the following shall be inserted, namely:-

**"12A. Emergency powers of the Managing Director.-** The Managing Director may, in cases of emergency, direct the execution of any work or the doing of any act which requires the sanction of the Board if the immediate execution or the doing of which is, in his opinion, necessary for the service or safety of the public and may also direct that the expenses of executing the work or of doing the act shall be paid from the funds of the Board subject to ratification by the Board:

Provided that,-

(a) he shall not act under this section in contravention of any direction of the Board or the Government prohibiting the execution of any particular work or the doing of any particular act;

(b) he shall report the action taken by him under this section and the reason thereof to the Board at its next meeting."

**8. Amendment of section 17.-** In section 17 of the Principal Act, in sub section (2) the words "Members" shall be omitted.

**9. Substitution of expressions.-** In the Principal Act, for the words "member" or "members" wherever they occur except in clause (d) of sub section (1) of section 6 and section 101, the words "Director" or "Directors" shall respectively be substituted.

## STATEMENT OF OBJECTS AND REASONS

It is considered necessary to amend the Bangalore Water Supply and Sewerage Act, 1964, to provide for appointment of the Chairman and the Managing Director and Powers and Functions thereof for better functioning of the Bangalore Water Supply and Sewerage Board as provided in the Karnataka Urban Water Supply and Sewerage Board.

Hence, the Bill.

## FINANCIAL MEMORANDUM

There is no extra expenditure involved in the proposed legislative measure on the consolidated fund of the State.

**MEMORANDUM REGARDING DELEGATED LEGISLATION**

| | | |
|---|---|---|
| | | In Section 3A and 3C sought to be inserted by clause 4 |
| **Clause 4.-** | (i) | Sub-section (2) of section 3A, empowers the State Government to make rules to prescribe the terms and conditions of service of the Chairman of the Board. |
| | (ii) | Clause (f) of sub-section (2) of section 3C, empowers the State Government to make rules to prescribe the powers and functions of the Managing Director of the Board. |

The proposed delegation of legislative power is in normal Character.

**SIDDARAMAIAH**
Chief Minister

**P. OMPRAKASHA**
Secretary
Karnataka Legislative Assembly

## ANNEXURE

## EXTRACT FROM THE BANGALORE WATER SUPPLY AND SEWERAGE ACT, 1964 (KARNATAKA ACT 36 OF 1964)

**XX** **XX** **XX**

**3. Constitution and composition of the Bangalore Water Supply and Sewerage Board.**—(1) The State Government shall as soon as may be after the commencement of this Chapter, constitute by notification in the official Gazette a Board by the name of "The Bangalore Water Supply and Sewerage Board".

(2) The Board shall consist of not less than three and not more than nine members appointed by the State Government.

(3) Of the members,— (*a*) one shall be a person who has experience of, and has shown capacity in commercial matters and administration;

(*b*) two shall be 1[a person with wide experience of civil engineering works preferably in the field of public health engineering with reference to water supply, sewerage and sewage disposal and industrial wastes; and

(*c*) one shall be a person who has experience of accounting and financial matters in a public utility undertaking, preferably a water supply or sewage disposal undertaking.

(4) One of the members possessing any of the qualifications specified in sub-section (3) shall be appointed by the State Government to be the Chairman of the Board.

(5)A person shall be disqualified for being appointed or being a member of the Board if he is a member of the Parliament or of any State Legislature or any local authority.

**XX** **XX** **XX**

**5. Disqualification for becoming a member of the Board.**—(1) A person shall be disqualified for being appointed as a member of the Board, and for being a member thereof, if, save as hereinafter provided, he has directly or indirectly by himself or his partner any share or interest in any work done by order of the Board or in any contract or employment with, or under, or by, or on behalf of, the Board.

**XX** **XX** **XX**

(3) A disclosure referred to in the proviso to sub-section (2) shall forthwith be recorded in the minutes of the Board and communicated to the State Government and the State Government may thereupon give such directions as it may deem proper.

**XX** **XX** **XX**

**10. Authentication of orders and other instruments of the Board.**—All orders and decisions of the Board shall be authenticated by the signature of the Chairman or any other member authorised by the Board in this behalf and all other instruments issued by the Board shall be authenticated by the signature of such member or officer of the Board as may in like manner be authorised in this behalf

**XX** **XX** **XX**

**17. Annual financial statement.**—(1) In February of each year the Board shall submit to the State Government a statement in the form prescribed by 1[regulations]1 of the estimated capital and revenue receipts and expenditure for the ensuing year.

(2) The said statement shall include a statement of the salaries of members, officers and servants of the Board and of such other particulars as may be prescribed by rules.

**XX** **XX** **XX**

Government Press, Vikasa Soudha, Bangalore, P7, W.D. 1204, Copies 750, 16th March, 2015